2) ಬೀದಿ ದೀಪಗಳಿಗೆ ಯುನಿಟ್ ಒಂದಕ್ಕೆ ರೂ 3 10 ಕುಡಿಯುವ ನೀರಿನ ಪಂಪ್ ಸೆಟ್‌ಗಳಿಗೆ ಮಾಸಿಕ ನಿಗದಿತ ದರ ರೂ 175
3) ಸೇವಾಶುಲ್ಕ ಒಟ್ಟಾರೆ ಮೊತ್ತದ ಶೇಕಡ 5ರಷ್ಟು,
4) ಪ್ರಸ್ತುತ ಬೇಡಿಕೆಯನ್ನು ಸೇರಿಸಿ ವಿಧಿಸುತ್ತಿರುವ ಬಡ್ಡಿದರ ಶೇಕಡ 2
ಮೇಲಿನ ಕಾರಣಗಳಿಂದ ವಿದ್ಯುತ್ ಬಿಲ್ಲಿನ ಮೊತ್ತ ಹೆಚ್ಚಾಗಿದ್ದು, ಇದನ್ನು ಭರಿಸಲು ಸಂಪನ್ಮೂಲದ ಕೊರತೆ ಇದೆ ಹಾಗು ಇದನ್ನು ಭರಿಸಲು ಪ್ರತ್ಯೇಕ ಅನುದಾನವಿರುವುದಿಲ್ಲ

ಈ) ಫಲಾನುಭವಿಗಳು ಕಡಿಮೆ ಇರುವುದರಿಂದ ವಿದ್ಯುತ್ ಬಿಲ್ಲನ್ನು ನಿರ್ವಹಣೆ ವೆಚ್ಚದ ಮೊಬಲಗನ್ನು ವಸೂಲು ಮಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಗಮನಿಸಲಾಗಿದೆ

ಉ) ವಿದ್ಯುತ್ ಬಿಲ್ಲನ್ನು ಸರ್ಕಾರದ ವತಿಯಿಂದಲೇ ಪಾವತಿಸಲು ಕ್ರಮ ಕೈಗೊಳ್ಳಲಾಗುವುದೇ?

ವಿದ್ಯುತ್ ಬಿಲ್ ಪಾವತಿಸಲು ಸರ್ಕಾರದಿಂದ ಪ್ರತ್ಯೇಕವಾದ ಅನುದಾನವನ್ನು ನಿಗದಿಗೊಳಿಸಿರುವುದಿಲ್ಲ

ಊ) ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು?

ಕರ್ನಾಟಕ ಪಂಚಾಯ್‌ರಾಜ್ ಅಧಿನಿಯಮ 93ರ ನಿಯಮ 206ರಡಿ ಗ್ರಾಮ ಪಂಚಾಯತಿಗಳಿಗೆ ನೀಡುವ ಶಾಸನಬದ್ಧ ಅನುದಾನದಿಂದ ವಿದ್ಯುತ್ ಬಿಲ್ಲನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	**1212(1571)**
ಸದಸ್ಯರ ಹೆಸರು	**ಶ್ರೀಮತಿ ಶಕುಂತಲಾ ಟಿ ಶೆಟ್ಟಿ(ಪುತ್ತೂರು)**
ಉತ್ತರಿಸುವವರು	**ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪೂಣಚ-ಪರಿಯಾಲ್ತಡ್ಕ ಅನುದಾನಿತ ಶಾಲೆಯ ಮುಖ್ಯೋಪಾಧ್ಯಾಯರ ಬಡ್ತಿಯಲ್ಲಿ ತೊಂದರೆಯಾಗಿ ನ್ಯಾಯಾಲಯಕ್ಕೆ ಹೋದದ್ದು ನಿಜವೇ,

ಹೌದು ದಿ 10 4 1991 ರಿಂದ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಯ ಬಗ್ಗೆ ವಿವಿಧ ಹಂತಗಳ ನ್ಯಾಯಾಲಯಗಳಲ್ಲಿ ಆಡಳಿತ ಮಂಡಳಿ ಮತ್ತು ಜೇಷ್ಠತೆಯಲ್ಲಿ ಹಿರಿಯರಾದ ಶಿಕ್ಷಕರ ಮಧ್ಯೆ ದಾವೆ ನಡೆಯುತ್ತಿದೆ

ಆ) ನ್ಯಾಯಾಲಯದ ತೀರ್ಪು ಬಂದಿದೆಯೇ ಹಾಗೂ ಅದನ್ನು ಜಾರಿಗೆ ತರಲಾಗಿದೆಯೇ,

ಇ) ಇಲ್ಲದಿದ್ದರೆ, ಜಾರಿಗೆ ತರದಿರಲು ಕಾರಣವೇನು,

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು, ಪೂಣಚ–ಪೆರಿಯಾಲ್ತಡ್ಕ ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಸಂದರ್ಭದಲ್ಲಿ ಸೇವಾ ಹಿರಿತನವನ್ನು ಕಡೆಗಣಿಸಿ, ಸೇವೆಯಲ್ಲಿ ಕಿರಿಯರಾದ ಶಿಕ್ಷಕರಿಗೆ ಬಡ್ತಿ ನೀಡಿರುವುದರಿಂದ, ವಿವಾದವುಂಟಾಗಿ, ಈ ವಿಚಾರವಾಗಿ ಇ ಎ ಟಿ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಸದರಿ ನ್ಯಾಯಾಲಯಗಳು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ನಿರ್ದೇಶಕರು (ಪ್ರಾ.ಶಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಲ್ಲಿ ಮೇಲ್ಮನವಿ ಸಂಖ್ಯೆ 38/2000ಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ಸೇವೆಯಲ್ಲಿ ಹಿರಿಯರಾದ ಶಿಕ್ಷಕರಿಗೆ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡುವಂತೆ ದಿ 2 4 2004ರಂದು ನಿರ್ದೇಶಕರು (ಪ್ರಾ.ಶಿ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಆದೇಶ ಮಾಡಿರುತ್ತಾರೆ

ದಿ 2 4 2004ರ ನಿರ್ದೇಶಕರ ಆದೇಶದ ವಿರುದ್ಧ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಲ್ಲಿ ಆಡಳಿತ ಮಂಡಳಿಯವರು ಮೇಲ್ಮನವಿ ಸಂಖ್ಯೆ 3/2004ನ್ನು ಸಲ್ಲಿಸಿದರು ಸದರಿ ಮೇಲ್ಮನವಿಯನ್ನು ದಿ 28 8 2006 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ನಿರ್ದೇಶಕರ ದಿ 2 4 2004ರ ಆದೇಶವನ್ನು ಎತ್ತಿಹಿಡಿದು, ಅದರಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿ ಆಡಳಿತ ಮಂಡಳಿಯವರ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ ಅನಂತರ, ಆಡಳಿತ ಮಂಡಳಿಯವರು ಆಯುಕ್ತರ ದಿ 28 8 2006ರ ಆದೇಶದ ವಿರುದ್ಧ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರುರವರ ಮುಂದೆ ಮೇಲ್ಮನವಿ ಸಂಖ್ಯೆ 40/2006ರನ್ನು ಸಲ್ಲಿಸಿರುತ್ತಾರೆ ಸದರಿ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ (ಇಡಿ 280 ಪಿಎಂಸಿ 2006)

ಈ) ಇದರಿಂದಾಗಿ ಮುಖ್ಯೋಪಾಧ್ಯಾಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು ಆಡಳಿತ ಮಂಡಳಿಯು ಇಲಾಖೆಯ ಆದೇಶಗಳನ್ನು ಪಾಲಿಸಲು ವಿಳಂಬ ಮಾಡಿರುವುದು, ಶಿಕ್ಷಕರಿಗೆ ಸಿಗುವ ಸೌಲಭ್ಯದ ಬಗ್ಗೆ ಅನಾವಶ್ಯಕ ಕಿರುಕುಳ ನೀಡುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ತಪ್ಪಿಸುವ ಸಲುವಾಗಿ ಸದರಿ ಆಡಳಿತ ಮಂಡಳಿಗೆ ವಿಶೇಷಾಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ (ಇಡಿ 439 ಪಿಎಂಸಿ 2005)